ಸಂಖ್ಯೆ:

ಪೊಲೀಸ್ ಅಧೀಕ್ಷಕರವರ ಕಚೇರಿ,
ರಾಮನಗರ ಜಿಲ್ಲೆ, ರಾಮನಗರ.
ದಿನಾಂಕ: 25-10-2021.

# -: ಪತ್ರಿಕಾ ಪ್ರಕಟಣೆ :-

**" ಮಾಗಡಿ ಪೊಲೀಸರಿಂದ ಕುಖ್ಯಾತ ಮನೆಗಳ್ಳನ ಬಂಧನ,
11 ಪ್ರಕರಣಗಳ ಪತ್ತೆ, ಸುಮಾರು 36.5 ಲಕ್ಷ ಮೌಲ್ಯದ ಚಿನ್ನಾಭರಣಗಳ ವಶ."**

*****

ದಿನಾಂಕ.29.07.2021 ರಂದು ಮಧ್ಯಾಹ್ನ 03.15 ಗಂಟೆಗೆ ಮಾಗಡಿ ತಾಲ್ಲೂಕು ಕೆ.ವಿ ತಾಂಡ್ಯ ಗ್ರಾಮದ ವಾಸಿ ಶಾರದಮ್ಮ ಎಂಬುವವರು ಕೂಲಿ ಕೆಲಸ ಮುಗಿಸಿಕೊಂಡು ತಮ್ಮ ಮನೆಗೆ ಬಂದು ತಮ್ಮ ಮಾಂಗಲ್ಯ ಸರ ಮತ್ತು ಒಂದು ಜೊತೆ ಕಿವಿ ಓಲೆಯನ್ನು ಟಿ.ವಿ ಪಕ್ಕದಲ್ಲಿ ಬಿಚ್ಚಿಟ್ಟು ಸ್ನಾನಕ್ಕೆ ಹೋದಾಗ ಯಾರೋ ಕಳ್ಳರು ಮೇಲ್ಕಂಡ ಒಡವೆಗಳನ್ನು ಕಳ್ಳತನ ಮಾಡಿರುವ ಬಗ್ಗೆ ನೀಡಿದ ದೂರಿನ ಮೇರೆಗೆ ಮಾಗಡಿ ಪೊಲೀಸ್ ಠಾಣಾ ಮೊನಂ. 162/2021 ಕಲಂ.380 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿತ್ತು.

ಇದೇ ರೀತಿ ಕುದೂರು, ತಾವರೆಕೆರೆ, ರಾಮನಗರ ಟೌನ್ ಹಾಗೂ ರಾಮನಗರ ಗ್ರಾಮಾಂತರ ಠಾಣಾ ವ್ಯಾಪ್ತಿಗಳಲ್ಲಿ ಮನೆಗಳ್ಳತ ಪ್ರಕರಣಗಳು ದಾಖಲಾಗಿದ್ದು ಪತ್ತೆಗಾಗಿ ಮಾಗಡಿ ಉಪವಿಭಾಗದ ಉಪಾಧೀಕ್ಷಕರಾದ ಶ್ರೀ ಟಿ.ಎ ಓಂಪ್ರಕಾಶ್ ರವರ ನೇತೃತ್ವದಲ್ಲಿ ಮಾಗಡಿ ಪೊಲೀಸ್ ಠಾಣಾ ಆರಕ್ಷಕ ನಿರೀಕ್ಷಕರಾದ ಶ್ರೀ ರವಿ.ಬಿ ಹಾಗೂ ಪಿಎಸ್ಐ ಶ್ರೀಕಾಂತ್ ಎಸ್, ಮತ್ತು ಸಿಬ್ಬಂದಿಗಳನ್ನೊಳಗೊಂಡ ತಂಡವನ್ನು ನೇಮಿಸಿದ್ದು ಸದರಿ ವಿಶೇಷ ತಂಡವು ಆರೋಪಿಯ ಬಗ್ಗೆ ಮಾಹಿತಿ ಸಂಗ್ರಹಿಸಿ ತುಮಕೂರು ಜಿಲ್ಲೆ ಮತ್ತು ತಾಲ್ಲೂಕಿನ ಊರ್ಡಿಗೆರೆ ಹೋಬಳಿಯ ಜ್ಯೋತಿಪುರ ಗ್ರಾಮದ ವಾಸಿ ಸುಮಾರು 29 ವರ್ಷದ ರಘು ಎಂಬಾತನನ್ನು ದಸ್ತಗಿರಿ ಮಾಡಿ ಆರೋಪಿಯನ್ನು ಹೆಚ್ಚಿನ ವಿಚಾರಣೆಗೊಳಪಡಿಸಿದಾಗ ಈತನು ಮಾಗಡಿ ಠಾಣೆಯ ಮೇಲ್ಕಂಡ ಪ್ರಕರಣವನ್ನು ಒಳಗೊಂಡಂತೆ 03 ಪ್ರಕರಣಗಳು, ಕುದೂರು ಠಾಣೆಯ 04 ಪ್ರಕರಣಗಳು, ರಾಮನಗರ ಗ್ರಾಮಾಂತರ ಠಾಣೆಯ 02 ಪ್ರಕರಣಗಳು, ತಾವರೆಕೆರೆ ಹಾಗೂ ರಾಮನಗರ ಪುರ ಠಾಣೆಯ ತಲಾ 01 ಪ್ರಕರಣವು ಸೇರಿದಂತೆ ಒಟ್ಟು 11 ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ತಿಳಿದುಬಂದಿದ್ದು, ಆರೋಪಿ ಕಡೆಯಿಂದ ನಗದು ಹಣವನ್ನು ಒಳಗೊಂಡಂತೆ ಕಳ್ಳತನದ ಮಾಲುಗಳಾದ ಸುಮಾರು ರೂ.36.5 ಲಕ್ಷ ಮೌಲ್ಯದ 805 ಗ್ರಾಂ ತೂಕದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ.

ಸದರಿ ಆರೋಪಿಯು ಕುಖ್ಯಾತ ಮನೆಗಳ್ಳತನ ಮಾಡುವ ಆಸಾಮಿಯಾಗಿದ್ದು ಬೀಗ ಹಾಕಿರುವ ಒಂಟಿ ಮನೆಗಳನ್ನು ಗಮನಿಸಿ ಬೀಗ ತೆಗೆದು ಅಥವಾ ಹೊಡೆದು ಮನೆಯಲ್ಲಿದ್ದ ಚಿನ್ನಾಭರಣಗಳನ್ನು ದೋಚಿ ಹಣ ಸಂಪಾದಿಸಿ ಐಷಾರಾಮಿ ಜೀವನ ಮಾಡುವವನಾಗಿದ್ದು, ಈ ಹಿಂದೆ ತುಮಕೂರು ಜಿಲ್ಲೆಯ ಹೆಬ್ಬೂರು, ತುಮಕೂರು ಗ್ರಾಮಾಂತರ, ಕೊರಟಗೆರೆ, ಕೋರಾ, ಕೊಳಾಲ, ಕ್ಯಾತಸಂದ್ರ ಪೊಲೀಸ್ ಠಾಣೆಗಳಲ್ಲಿನ ಒಟ್ಟು 15 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾದವನಾಗಿದ್ದು, ಈತ ದಸ್ತಗಿರಿಯಾಗಿ ಕಾರಾಗೃಹದಲ್ಲಿದ್ದು ನಂತರ ನ್ಯಾಯಾಲಯದಿಂದ ಜಾಮೀನು ಪಡೆದು ಬಂದವನಾಗಿರುತ್ತಾನೆ.

ಮೇಲ್ಕಂಡ ಪ್ರಕರಣದಲ್ಲಿ ಆರೋಪಿ ಮತ್ತು ಮಾಲನ್ನು ಪತ್ತೆ ಮಾಡುವ ಬಗ್ಗೆ ರಾಮನಗರ ಜಿಲ್ಲೆಯ ಪೊಲೀಸ್ ಅಧೀಕ್ಷಕರಾದ ಶ್ರೀ ಗಿರೀಶ್, ಐ.ಪಿ.ಎಸ್ ರವರ ಮಾರ್ಗದರ್ಶನದಲ್ಲಿ, ಮಾಗಡಿ ಉಪಾಧೀಕ್ಷಕರಾದ ಶ್ರೀ. ಓಂಪ್ರಕಾಶ್ ಕೆ.ಎಸ್.ಪಿ.ಎಸ್ ರವರ ನೇತೃತ್ವದಲ್ಲಿ ಮಾಗಡಿ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಶ್ರೀ ರವಿ.ಬಿ

ಹಾಗೂ ಪಿಎಸ್ಐ ಶ್ರೀಕಾಂತ್ ಎಸ್, ರವರ ಕಾರ್ಯಾಚರಣೆಯಲ್ಲಿ, ಮಾಗಡಿ ಠಾಣೆಯ ಶ್ರೀ ದೇವರಾಜು ಎ.ಎಸ್.ಐ, ಸಿಬ್ಬಂದಿಗಳಾದ ಮುತ್ತುರಾಜು, ನಾಗರಾಜು.ಕೆ, ಬೀರಪ್ಪ, ಮಂಜುನಾಥ್, ಈರಣ್ಣ, ಲೋಹಿತ್ ಕುಮಾರ್, ಮುನೀಂದ್ರ, ಕೇಶವ್ ರವರ ತಂಡವು ಆರೋಪಿ ಮತ್ತು ಮಾಲನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ.

ರಾಮನಗರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಗಿರೀಶ್.ಎಸ್ ಐ.ಪಿ.ಎಸ್ ರವರು ಮಾಗಡಿ ಪೊಲೀಸ್ ಠಾಣೆಯ ಸಂಬಂದಿಸಿದ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಶ್ಲಾಘಿಸಿ, ಸೂಕ್ತ ಬಹುಮಾನವನ್ನು ಘೋಷಿಸಿರುತ್ತಾರೆ.

ರವರಿಗೆ,

ಎಲ್ಲಾ ಪತ್ರಿಕಾ ಮತ್ತು ದೃಶ್ಯ ಮಾದ್ಯಮ ವರದಿಗಾರರಿಗೆ.